೨) ೧) ಒಟ್ಟು ಮಂಜೂರು ಮಾಡಿದ ಹಣ ರೂ. ೩,೦೨,೭೨೭

೨) ಸರ್ಕಾರದ ಸಾಲ ರೂ. ೧,೫೧,೮೬೪

೩) ಪುರಸಭೆಯ ಪಾಲು ರೂ. ೧,೫೧,೮೬೩

೫) ಖರ್ಚು ಮಾಡಿದ ಹಣ ರೂ. ೨,೬೦,೭೭೮-೪೮.

ಯೋಜನೆಯ ಒಳಚರಂಡಿ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲಾಯಿತು. ಶುದ್ಧೀಕರಿಣ ಘಟಕದ ಜಾಗವು ಮಲಪ್ರಭಾ ಜಲಾಶಯದ ಮುಳುಗಡೆಯಲ್ಲಿ ಬಂದಿದ್ದರಿಂದ ಘಟಕದ ಕೆಲಸವನ್ನು ಕಾರ್ಯಗತಗೊಳಿಸಲಾಗಲಿಲ್ಲ.

ಈಗ ಬೆಳೆದಿರುವ ಪಟ್ಟಣದ ಎಲ್ಲಾ ಪ್ರದೇಶಗಳನ್ನು ವ್ಯಾಪಿಸಿ, ಹೊಸ ಒಳಚರಂಡಿ ಯೋಜನೆಯನ್ನು ಕಾರ್ಯಗತ ಮಾಡಲು ಸರ್ವೆ ನಡೆಸಿ ನಕ್ಷೆ ಅಂದಾಜನ್ನು ತಯಾರಿಸಲು ಮಂಡಲಿಗೆ ಪುರಸಭೆಯು ೧೦,೦೦೦ ರೂ. ಗಳನ್ನು ಪಾವತಿ ಮಾಡಿದೆ. ಸರ್ವೆ ನಡೆಸಿದ ನಕ್ಷೆ ಅಂದಾಜನ್ನು ತಯಾರಿಸಲು ಮಂಡಲಿಯು ಕ್ರಮ ಕೈ ಗೊಂಡಿದೆ.

ರಾಜ್ಯ ಸಾರಿಗೆ ಸಂಸ್ಥೆ

೧೦೬೮. ಶ್ರೀ ಬಿ. ವಿ. ಕರೀಗೌಡ (ಹಾಸನ).—ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನದಲ್ಲಿ ರಾಜ್ಯ ರಸ್ತೆ ಸಾರಿಗೆ ವತಿಯಿಂದ ಮಂಜೂರಾದ ಪ್ರಾದೇಶಿಕ ಕಾರ್ಯಾಗಾರದ ಶಂಕುಸ್ಥಾಪನೆಯಾಗಿ ಒಂದು ವರ್ಷವಾದರೂ, ಇದುವರೆವಿಗೂ ಯಾವ ಕೆಲಸವೂ ನಡೆಯದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಇ) ಬೆಂಗಳೂರಿನ ಕೆಂಕೋ ಕಾರ್ಖಾನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೊಂದಿಗೆ ವಿಲೀನಗೊಳಿಸಲು ನಿರ್ಧರಿಸಿರುವುದು ನಿಜವೇ ? ಹಾಗಿದ್ದಲ್ಲಿ ಹಾಸನದಲ್ಲಿರುವ ಕೆಂಕೋ ಕಾರ್ಖಾನೆಯನ್ನು ಸಹ ವಿಲೀನಗೊಳಿಸಲಾಗುವುದೇ ?

ಈ) ಹಾಸನ ಜಿಲ್ಲೆಯಲ್ಲಿ ೧೯೬೨ ರಲ್ಲಿಯೇ ಬಸ್ ರಾಷ್ಟ್ರೀಕರಣ ಮಾಡಿದ್ದರೂ ಇದುವರೆವಿಗೂ ಬಸ್ಸಿನ ವ್ಯವಸ್ಥೆ ಸರಿ ಇರುವುದಿಲ್ಲ ಜೊತೆಗೆ ಹಾಸನ ನಗರದಲ್ಲಿ ಸಿಟಿ ಬಸ್ ವ್ಯವಸ್ಥೆ ಇಲ್ಲದೆ ಸುಮಾರು ಒಂದು ಲಕ್ಷ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ಹಾಗೂ ವಸತಿ ಮಂತ್ರಿಗಳು).—

ಅ) ಬಂದಿದೆ. ಹಾಸನ ಕಾರ್ಯಾಗಾರವನ್ನು ಆರಂಭಿಸಲು ರಸ್ತೆ ಸಾರಿಗೆ ಸಂಸ್ಥೆಯವರು ಹೊಂದಿರುವ ಜಾಗವು ಸಾಲುವುದಿಲ್ಲ. ಆದ್ದರಿಂದ ಇನ್ನೂ ಸ್ವಲ್ಪ ಜಾಗವನ್ನು ಖರೀದಿ ಮಾಡಿ ಸ್ವಾಧೀನ ಪಡಿಸಿಕೊಳ್ಳಲು ಸಾಧ್ಯವಾಗದೇ ಇರುವ ಕಾರಣ ಸದರೀ ಕಾರ್ಯಾಗಾರದ ಯಾವ ಕೆಲಸವನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ.

ಆ) ಹಾಸನ ಕಾರ್ಯಾಗಾರಕ್ಕೆ ಬೇಕಾಗುವ ಜಾಗವನ್ನು ಸ್ವಾಧೀನಪಡಿಸಿ ಕೊಡಲು ಪ್ರಾರ್ಥಿಸಿದ ಮನವಿ ಇನ್ನೂ ಹಾಸನ ಜಿಲ್ಲಾಧಿಕಾರಿಯ ಪರಿಶೀಲನೆಯಲ್ಲಿದೆ.

ಇ) ಇಲ್ಲಾ.

ಈ) ಹಾಸನ ಜಿಲ್ಲೆಯಲ್ಲಿ ಪ್ರಯಾಣಿಕರ ಬೇಡಿಕೆಗಳಿಗೆ ಅನುಗುಣವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಹಾಸನ ನಗರದಲ್ಲಿ ಮುಖ್ಯ ಸ್ಥಳಗಳಿಗೆ ಸಾರಿಗೆ ಸೌಲಭ್ಯ ಒದಗಿಸಲಾಗುತ್ತಿದೆ.

ಉ) ಸಾರಿಗೆ ಸೌಲಭ್ಯ ಸಾಕಾಗದೆ ಇರುವ ಬಗ್ಗೆ ಯಾವುದಾದರೂ ನಿರ್ದಿಷ್ಟ ಬೇಡಿಕೆಯನ್ನು ಗಮನಕ್ಕೆ ತಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.